# SAMPLE PAPER FOR SUMMATIVE ASSESSMENT - I

**FIRST TERM** (April-Sept 2010)

**SUB : KANNADA** **M.MARKS: 80** **TIME: 3 Hrs**

**CLASS-IX**

---

*ಸೂಚನೆಗಳು : 1. ಈ ಪ್ರಶ್ನೆ ಪತ್ರಿಕೆಯು ಎ,ಬಿ,ಸಿ, ಮತ್ತು ಡಿ ಎಂಬ ನಾಲ್ಕು ಭಾಗಗಳನ್ನೊಳಗೊಂಡಿರುತ್ತದೆ.*

- *ವಿಭಾಗ–A (ವಾಚನ ಮತ್ತು ಗ್ರಹಿಕಾ ಕೌಶಲ) : 12 ಅಂಕಗಳು*
- *ವಿಭಾಗ–B (ಬರವಣಿಗೆ ಕೌಶಲ) : 14 ಅಂಕಗಳು*
- *ವಿಭಾಗ–C (ಅನ್ವಯಿಕ ವ್ಯಾಕರಣ) : 14 ಅಂಕಗಳು*
- *ವಿಭಾಗ–D (ಪಠ್ಯಗಳ ಅಧ್ಯಯನ) : 40 ಅಂಕಗಳು*

---

## ವಿಭಾಗ–A (ವಾಚನ ಮತ್ತು ಗ್ರಹಿಕಾ ಕೌಶಲ) : (*12 ಅಂಕಗಳು*)

I. 1. ಈ ಗದ್ಯಭಾಗವನ್ನು ಓದಿ ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಒಂದು ಭಾಷೆ ಸತ್ವಪೂರ್ಣವಾಗಬೇಕಾದರೆ ಅದನ್ನಾಡುವ ಜನರು ಅಭಿಮಾನಧನರೂ, ಬುದ್ಧಿಶಾಲಿಗಳೂ, ಪ್ರಯೋಗಶೀಲರೂ ಆಗಿರಬೇಕು. ನಾಲ್ಕೈದು ಶತಮಾನಗಳ ಹಿಂದೆ ಆಂಗ್ಲ ಭಾಷೆ ಯೂರೋಪಿನ ಸಾಮಾನ್ಯ ಭಾಷೆಗಳಲ್ಲಿ ಒಂದಾಗಿತ್ತು. ಆಂಗ್ಲ ಜನತೆ ಸಾಹಸ ಜೀವಿಯಾಯಿತು, ಬುದ್ಧಿಶಾಲಿಯಾಯಿತು. ಸೂರ್ಯನು ಎಂದೂ ಮುಳುಗನೆನ್ನುವಂತಹ ವಿಸ್ತಾರವಾದ ಸಾಮ್ರಾಜ್ಯವನ್ನು ಸ್ಥಾಪಿಸಿತು. ದೇಶ ವಿದೇಶಗಳ ಭಾಷೆ ಹಾಗೂ ಸಾಹಿತ್ಯ ಸಂಸ್ಕೃತಿಯನ್ನು ಆಂಗ್ಲ ಪಂಡಿತರು ಮುಕ್ತ ಮನಸ್ಸಿನಿಂದ ಅಭ್ಯಸಿಸಿದರು. ತನ್ಮೂಲಕ ತಮ್ಮ ಭಾಷೆ ಮತ್ತು ಸಾಹಿತ್ಯವನ್ನು ಹಿಗ್ಗಿಸಿದರು, ಅರಳಿಸಿದರು. ಎಲ್ಲಕ್ಕೂ ಮೇಲಾಗಿ ಮಹಾ ಮೇಧಾವಿಗಳು ತಮ್ಮ ಆಸೆ, ಆಕಾಂಕ್ಷೆ, ವಿಚಾರ ಮುಂತಾದವುಗಳನ್ನು ಆ ಭಾಷೆಯ ಮುಖಾಂತರವೇ ಹೇಳಬೇಕೆಂಬ ಉಜ್ವಲ ಅಭಿಮಾನವುಳ್ಳವರಾಗಿದ್ದರು. ಆಂಗ್ಲ ವಿಜ್ಞಾನಿಗಳು, ರಾಜಕಾರಣಿಗಳು, ಅರ್ಥಶಾಸ್ತ್ರಜ್ಞರು ಹೀಗೆ ಎಲ್ಲರೂ ತಮ್ಮ ಭಾಷೆಯನ್ನೇ ಬಳಸಿದುದರ ಪರಿಣಾಮವಾಗಿ ಆಂಗ್ಲ ಭಾಷೆ ಬೆಳೆದು ಇಂದು ಪ್ರಪಂಚದ ದೊಡ್ಡ ಭಾಷೆಗಳಲ್ಲಿ ಒಂದಾಗಿದೆ.ಇದಕ್ಕೆಲ್ಲ ಆಂಗ್ಲ ಜನರ ಸಂಕಲ್ಪ,ಕೃಷಿ ಕಾರಣವೆಂದು ಬೇರೆ ಹೇಳಬೇಕಿಲ್ಲ.

ಸ್ವಭಾಷೆಯನ್ನು ಪ್ರೀತಿಸಬೇಕು, ಗೌರವಿಸಬೇಕು,ಬೆಳೆಸಬೇಕು ಎಂದರೆ ಅನ್ಯ ಭಾಷೆಗಳನ್ನು ತಿರಸ್ಕರಿಸಬೇಕೆಂದು ಅರ್ಥವಲ್ಲ. ಭಾಷೆಗಳಲ್ಲಿ ಮೇಲು– ಕೀಳೆಂಬುದಿಲ್ಲ. ನಾಲ್ಕು ಜನ ಮಾತನಾಡುತ್ತಿದ್ದ ಭಾಷೆಗೂ ನಲವತ್ತು ಲಕ್ಷ ಜನ ಮಾತನಾಡುತ್ತಿದ್ದ ಭಾಷೆಗೂ ಸತ್ವ ಹಾಗೂ ಸತ್ಯದೃಷ್ಟಿಯಿಂದ ಅಂತರವೇ ಇಲ್ಲ. ಎಲ್ಲ ಭಾಷೆಗಳೂ ಅಷ್ಟೇ. ಒಬ್ಬ ತಾಯಿಯ ಗಾನದ ಶೃತಿಯಂತೆ ಎಲ್ಲಕ್ಕೂ ಅಷ್ಟೇ ಸ್ಥಾನವಿದೆ. ಇದನ್ನರಿತು ಭಾರತೀಯರಾದ ನಾವು ನೆರೆಹೊರೆಯ ಭಾಷೆಗಳನ್ನು ದ್ವೇಷಿಸದೆ, ಸ್ವಭಾಷೆಯನ್ನು ಗೌರವಿಸಿ,ಪ್ರೀತಿಸಿ ಅಭಿವೃದ್ಧಿಗೊಳಿಸಿದರೆ ದೇಶದ ಸಂಸ್ಕೃತಿ ಮುಂದುವರೆಯುತ್ತದೆ.

ಪ್ರಶ್ನೆಗಳು:

ಅ) ಒಂದು ಭಾಷೆ ಸತ್ವಪೂರ್ಣವಾಗಬೇಕಾದರೆ ಏನು ಮಾಡಬೇಕು? 1

ಆ) ಆಂಗ್ಲ ಪಂಡಿತರು ತಮ್ಮ ಭಾಷೆಯನ್ನು ಹಿಗ್ಗಿಸಲು ಏನು ಮಾಡಿದರು? 2

ಇ) ಇಂದು ಆಂಗ್ಲ ಭಾಷೆ ಪ್ರಪಂಚದ ದೊಡ್ಡ ಭಾಷೆಗಳಲ್ಲಿ ಒಂದಾಗಲು ಕಾರಣವೇನು? 2

ಈ) ದೇಶದ ಸಂಸ್ಕೃತಿಯನ್ನು ಮುಂದುವರೆಸಲು ಭಾರತೀಯರಾದ ನಾವೇನು ಮಾಡಬೇಕು? 1

2. ಈ ಪದ್ಯಭಾಗವನ್ನು ಓದಿ ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಕಾಲು ದಾರಿಯ ಮೇಲೆ ಕಣ್ಣಿಟ್ಟು ನಡೆಯಣ್ಣ
ಎಲ್ಲೆಂದರಲ್ಲಿ ನೀ ದಾಟಬೇಡ;
ದಾರಿಯ ತುಂಬ ನಿಂತ ಹಲಗೆಯ ಮಾತ
ಅರಿತು ನಡೆ ನಿನಗೆ ಕ್ಷೇಮ!

ಚೌಕ ಚೌಕದ ನಡುವೆ ಖಾಕಿ ಬಟ್ಟೆಯ ಬೆರಳ
ಸನ್ನೆಯಲಿ ಬಿಡು ನಿನ್ನ ವಾಹನ;
ಕೆಂಪು–ಹಸುರಿನ ಮುಖದ ದೀಪಗಳ ಕಣ್ಣರಿತು
ಮುಂದೆ ನಡೆ, ಬೇಡ ಚಪಲ!

ನುಗ್ಗದಿರು ಮಂದಿಯಲಿ; ಏನಾದರೂ ನಿನ್ನ
ಜೇಬು ಜೋಪಾನ;
ಹೋಗುತ್ತಲೆ ಇರಬೇಕು ಈ ಹೊಳೆಯಲ್ಲಿ
ನಿಂತರೂ ದಡಹಿಡಿದು ಏರು ಸೋಪಾನ!

ಅಲ್ಲಲ್ಲಿ 'ಕ್ಯೂ'ನಿಂತು ಬಸ್ಸನು ಹತ್ತು; ಒತ್ತದಿರು
ನಿನಗಿಂತ ಮೊದಲೆ ಬಂದವರ;
ಬಸ್ಸಿನೊಳಗೂ ನೀನು ನಿಂತರೂ ಏನಂತೆ
ಎಷ್ಟು ಹೊತ್ತಿನ ಪಯಣ; ಏನಾತುರ!

ಇದು ನಗರ, ಸಾವಿರ ದಾರಿ ಸಾವಿರ ಬೆಳಕು
ತೊಡರುವುದು ಕಾಲಿಗೆ;
ನೂರಾರು ವಾಹನದ ಹೆಜ್ಜೆ ಸದ್ದಿನ ಜೊತೆಗೆ
ನೀ ಬರುವೆ ಮನೆಗೆ
ಅಲ್ಲಿಯ ತನಕ ಕಾತರವೆ ನನಗೆ!

– ಜಿ.ಎಸ್. ಶಿವರುದ್ರಪ್ಪ.

ಪ್ರಶೆಗಳು:

ಅ) ಕಾಲು ದಾರಿಯ ಮೇಲೆ ಹೇಗೆ ನಡೆಯಬೇಕೆಂದು ಕವಿ ಹೇಳಿದ್ದಾನೆ 1

ಆ) ಏನನ್ನು ಅರಿತು ವಾಹನವನ್ನು ಓಡಿಸಬೇಕು? 2

ಇ) ಜೇಬನ್ನು ಜೋಪಾನವಾಗಿಟ್ಟುಕೊಳ್ಳಲು ನಾವು ಏನು ಮಾಡಬೇಕು? 1

ಈ) ಕವಿಯ ಕಾತರವೇನು? 2

## ವಿಭಾಗ-B (ಬರವಣಿಗೆ ಕೌಶಲ) : (14 ಅಂಕಗಳು)

II. ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ೧೫೦ ಪದಗಳಿಗೆ ಮೀರದಂತೆ ನಿಬಂಧ ಬರೆಯಿರಿ. 6

೧. ನನ್ನ ಮೆಚ್ಚಿನ ಪುಸ್ತಕ ೨. ಪರಿಸರ ಮಾಲಿನ್ಯ. ೩. ದೂರದರ್ಶನ

III. ನೀವು ಮಾಡಿದ ಪ್ರವಾಸದ ಅನುಭವಗಳನ್ನು ತಿಳಿಸುತ್ತ ನಿಮ್ಮ ಗೆಳೆಯನಿಗೆ/ಗೆಳತಿಗೆ ಪತ್ರ ಬರೆಯಿರಿ. 4

IV. ಕೆಳಗಿನ ಗದ್ಯಭಾಗವನ್ನು ಓದಿ ಅದರ ಮುಖ್ಯಾಂಶಗಳನ್ನು ಸಂಕ್ಷೇಪಿಸಿ ಬರೆಯಿರಿ. 4

ಮೂರನೆಯ ಸಹಸ್ರಮಾನ ಆರಂಭ. ಇತಿಹಾಸ ಪುಟಗಳನ್ನು ಗಮನಿಸಿದರೆ ಮೊದಲೆರಡು ಸಹಸ್ರಮಾನಗಳು ಭಾರತದ ನೆಲದಲ್ಲಿ ತೀವ್ರ ಸಂಘರ್ಷದ ನೆಲೆಯಾಗಿದ್ದನ್ನು ಕಾಣಬಹುದು. ಮೊದಲ ಸಹಸ್ರಮಾನ ದೇಶಿ ಒಳಜಗಳ ಘರ್ಷಣೆಗಳ ನೆಲೆಯಾಗಿದ್ದರೆ, ಎರಡನೆಯ ಸಹಸ್ರಮಾನ ವಿದೇಶಿ ಆಕ್ರಮಣ , ಅತಿಕ್ರಮಣಗಳ ರಕ್ತದೋಕುಳಿಯ ನರ್ತನಾಲಯ. ಇವೆರಡೂ ಸಹಸ್ರಮಾನಗಳ ಆಂತರಿಕ ಒಳಜಗಳ ಮತ್ತು ವಿದೇಶಿ ತಂಟೆ ಮೂರನೆಯ ಸಹಸ್ರಮಾನಕ್ಕೆ ಕಾಣಿಕೆಯಾಗಿ ಅಡಿಯಿಟ್ಟಿವೆ.

ಯುದ್ಧ, ಇತಿಹಾಸದುದ್ದಕ್ಕೂ ತನ್ನ ಇರುವಿಕೆಯನ್ನ ತೋರಿಸುತ್ತಾ ಬಂದಿದೆ. ಯಾವುದೇ ಸಾಮ್ರಾಜ್ಯದ ಏಳುಬೀಳುಗಳಲ್ಲಿ ಅದು ಪ್ರಮುಖ ಪಾತ್ರ ವಹಿಸಿದೆ. ಯುದ್ಧ ನಡೆಯಲು ಕಾರಣಗಳು ಹಲವು. ಸಾಮ್ರಾಜ್ಯದ ವಿಸ್ತರಣೆ, ಲೋಭ, ವೀರತೆಯ ಪ್ರದರ್ಶನ ಒಂದುಕಡೆಯಾದರೆ, ಕುಟುಂಬ ಕಲಹಗಳೂ ಯುದ್ಧಕ್ಕೆ ನಾಂದಿಹಾಡಿದ ಘಟನೆಗಳು ದಾಖಲಾಗಿವೆ. ಸುಮಾರು ಐದುಸಾವಿರ ವರ್ಷಗಳ ಹಿಂದೆ ನಡೆದ ಕುರುಕ್ಷೇತ್ರ ಯುದ್ಧ ಇದಕ್ಕೆ ಸ್ಪಷ್ಟ ನಿದರ್ಶನ. ಕುರುವಂಶದ ರಾಜಕುಮಾರರ ಅಂತಃಕಲಹ ಐವತ್ತು ಲಕ್ಷ ಜನರ ಪ್ರಾಣ ಹಾನಿಯೊಂದಿಗೆ ಪರ್ಯವಸಾನವಾಯಿತು. ಐತಿಹ್ಯದಂತೆ ಕೇವಲ ಹದಿನೆಂಟು ದಿನ ನಡೆದ ಈ ಯುದ್ಧ ಕಂಡ ಪರಿಣಾಮ ಅತ್ಯಂತ ಘೋರ.

ಭಾರತ ತನ್ನ ಇತಿಹಾಸದಲ್ಲಿ ಕಂಡ ಅತ್ಯಂತ ವರ್ಣರಂಜಿತ ವ್ಯಕ್ತಿತ್ವ ಕೌಟಿಲ್ಯನದು. ತನ್ನ ಹಠದ ಪಟ್ಟನ್ನು ಸಡಿಲಿಸದೆ, ಮನೋನಿಶ್ಚಯದಂತೆ ಅಪೂರ್ವಕುಶಲತೆಯನ್ನು ತೋರಿದ ಪ್ರತಿಭಾವಂತನೀತ. ತನ್ನನ್ನೇ ಅರಸಿಬಂದ ರಾಜ್ಯಲಕ್ಷ್ಮಿ, ಅಧಿಕಾರ ದೂರಿಕರಿಸಿ ವಿರಕ್ತನಂತೆ ಆಶ್ರಮವಾಸಿಯಾಗುತ್ತಾನೆ. ಚಾಣಕ್ಯನ ಪ್ರಕಾರ ಯುದ್ಧದಲ್ಲಿ ಮೂರು ವಿಧಗಳು. ಮೊದಲನೆಯದು ಪ್ರಕಾಶಯುದ್ಧ- ಸೂಚಿಸಿದ ಸ್ಥಳದಲ್ಲಿ ನಿರ್ದಿಷ್ಟ ಸಮಯಕ್ಕೆ ನಡೆಯುವ ಸಂಗ್ರಾಮ. ಎರಡನೆಯದು ಕೂಟಯುದ್ಧ- ತಂತ್ರಗಳ ಮೂಲಕ ಯುದ್ಧಮಾಡುವುದು. ಮೂರನೆಯದು ಮೌನಯುದ್ಧ- ಶತ್ರು ಅಧಿಕಾರಿಗಳನ್ನು ನಾಶಪಡಿಸಲು ಗುಪ್ತ ಕಾರ್ಯಾಚರಣೆ ನಡೆಸುವುದು.

## ವಿಭಾಗ-C (ಅನ್ವಯಿಕ ವ್ಯಾಕರಣ) : (14 ಅಂಕಗಳು)

V. ಈ ಕೆಳಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರ ಬರೆಯಿರಿ.

1.ಆವರಣದಲಿ ಕೊಟ್ಟಿರುವ ಪದವನ್ನು ಭೂತ ಕಾಲದಲ್ಲಿ ಪ್ರಯೋಗಿಸಿ ವಾಕ್ಯ ಪೂರ್ಣ ಮಾಡಿ. 1

ಕೇಂದ್ರ ಸರ್ಕಾರವು ಹೊಸ ಪರೀಕ್ಷಾ ಪದ್ಧತಿಯನ್ನು ಜಾರಿ -----( ಮಾಡು)

2. ಕೆಳಗಿನ ಪದಗಳನ್ನು ಜೋಡಿಸಿ ಅರ್ಥಪೂರ್ಣ ವಾಕ್ಯವನ್ನಾಗಿ ಮಾಡಿ. 1

ಬಹಳ ಬೋಸರಿಗೆ ಸುಭಾಸ್ ಚಂದ್ರ ನಿರಾಶೆಯಾಯಿತು.

3. ಈ ಹೇಳಿಕೆ / ಗಾದೆಯನ್ನು ಪೂರ್ಣಗೊಳಿಸಿ ಬರೆಯಿರಿ. 1

ಕುಂಬಾರನಿಗೆ ವರುಷ ______ _______.

4. ಕೆಳಗಿನ ಪಡೆನುಡಿಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ ಬರೆಯಿರಿ. 3

೧).ಶಿಸ್ತಿನ ಸಿಪಾಯಿ, ೨).ಗೊತ್ತುಗುರಿ, ೩).ಜನಜಾಗೃತಿ.

5. ನಿಮಗೆ ಬೇಕಾದ ಒಂದು ಗಾದೆ ಮಾತನ್ನು ವಿವರಿಸಿ. 2

೧. ಮನಸಿದ್ದರೆ ಮಾರ್ಗ.

೨. ನಾಲಿಗೆ ಒಳ್ಳೆಯದಾದರೆ ನಾಡೆಲ್ಲ ಒಳ್ಳೆಯದು.

6. ಕೆಳಗಿನ ವಾಕ್ಯವನ್ನು ನಿಷೇಧಾರ್ಥಕ ವಾಕ್ಯವನ್ನಾಗಿ ಪರಿವರ್ತಿಸಿ. 1

ಮುಖ್ಯಮಂತ್ರಿಗಳು ನಮ್ಮ ಶಾಲೆಗೆ ಬರುವರು.

7. ಈ ವಾಕ್ಯವನ್ನು ಪ್ರಶ್ನಾರ್ಥಕ ವಾಕ್ಯವನ್ನಾಗಿ ಪರಿವರ್ತಿಸಿ. 1

ರಾಧಾ ದೇಶ ಭಕ್ತಿಗೀತೆಯನ್ನು ಚೆನ್ನಾಗಿ ಹಾಡಿದಳು.

8. ಕೆಳಗಿನ ವಾಕ್ಯವನ್ನು ಭವಿಷ್ಯತ್ ಕಾಲದ ವಾಕ್ಯಕ್ಕೆ ಪರಿವರ್ತಿಸಿ. 1

ತಜ್ಞರು ಬಹಳಷ್ಟು ಸಂಶೋಧನೆಗಳನ್ನು ನಡೆಸಿದರು.

9. 'ಕೃಷ್ಣನು ಮಾವಿನ ಹಣ್ಣನ್ನು ತಿನ್ನಲಿಲ್ಲ' – ಈ ವಾಕ್ಯದಲ್ಲಿ ಇರುವ ನಿಷೇಧಾರ್ಥಕ ಕ್ರಿಯಾಪದವನ್ನು ಗುರುತಿಸಿ ಬರೆಯಿರಿ. 1

10. ಶಂಕರನು ಊಟವನ್ನು <u>ಮಾಡುವನು</u> –ಇಲ್ಲಿ ಗೆರೆ ಎಳೆದ ಪದದ ಪ್ರಶ್ನಾರ್ಥಕ ರೂಪ. 1

೧) ಮಾಡಿದ್ದಾನೆ. ೨) ಮಾಡಲಿಲ್ಲ. ೩) ಮಾಡುವನೇ ೪) ಮಾಡಬಹುದು

11. 'ನೀಡಿದಳು' ಈ ಪದದ ವರ್ತಮಾನ ಕಾಲದ ರೂಪ. 1

೧. ನೀಡುತ್ತಾಳೆ ೨. ನೀಡುವಳು ೩ ನೀಡಳು ೪. ನೀಡಲಿ.

## <u>ವಿಭಾಗ–D (ಪಠ್ಯಗಳ ಅಧ್ಯಯನ) : *(40 ಅಂಕಗಳು)*</u>

VI. ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ನಾಲ್ಕು ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. 14

1) ಶಿಕ್ಷಕರ ಬೆರಳು----ಮೇಲೆ ಹರಿದಾಡಿದವು.

೧) ಬೆನ್ನಿನ ೨) ಬಾಸುಂಡೆಯ ೩) ಕೆನ್ನೆಯ ೪) ಕೈ

2) ಕಿಟೆಲ್ ಭಾಮಿನಿ ಷಟ್ಪದಿಯಲ್ಲಿ ಬರೆದ ಕೃತಿ.

೧) ಶಬ್ದಮಣಿ ದರ್ಪಣ ೨) ಛಂದೋಂಬುಧಿ ೩) ಕ್ರಿಸ್ತ ಚರಿತ್ರೆ ೪) ವಡ್ಡಾರಾಧನೆ

3) ಪರಿಸರ ಶುಚಿ ರಕ್ಷಣೆ ಹಾಗೂ ಸಂರಕ್ಷಣೆ-------ಕೆಲಸವಲ್ಲ.

೧) ಒಂದು ದಿನದ ೨) ಪ್ರತಿ ದಿನದ ೩) ಒಂದು ತಿಂಗಳದ ೪) ಒಂದು ವರ್ಷದ

4) ಬಯಲಾಟದಲ್ಲಿ ಉಪಯೋಗಿಸುವ ವಿಶೇಷ ವಾದ್ಯ :

೧) ತಬಲಾ ೨) ಹಾರ್ಮೋನಿಯಂ ೩) ಕ್ಯಾಶಿಯೋ ೪) ಮುಖವೀಣೆ.

5) ಭಾರತೀಯ ರಾಷ್ಟ್ರೀಯ ಸೇನೆಯಲ್ಲಿದ್ದ ಸೈನಿಕರ ಸಂಖ್ಯೆ :

೧) 10,000 ೨) 20,000 ೩) 25,000 ೪) 30,000

6) ಈ ದಿನವನ್ನು ವಿಶ್ವಪರಿಸರ ದಿನವೆಂದು ಆಚರಿಸುತ್ತಾರೆ.

೧) ಜುಲೈ–೭ರಂದು ೨) ಜೂನ್–೫ರಂದು ೩) ಆಗಷ್ಟ್–೬ ರಂದು ೪) ಜೂನ್ ೨೨ ರಂದು

7) ಬಯಲಾಟ ಕಲಿಸುವವನಿಗೆ ------ಎಂದು ಕರೆಯುತ್ತಾರೆ.

೧) ಶಿಕ್ಷಕ ೨) ಮಾರ್ಗದರ್ಶಕ ೩) ನಿರ್ದೇಶಕ ೪) ಭಾಗವತ

8) ಹಕ್ಕಿಯ ಹಾಡು ಬಿತ್ತಿದ್ದು ಇದು :

೧) ಕನಸುಗಳನ್ನು ೨) ಮನಸ್ಸುಗಳನ್ನು ೩) ನನಸುಗಳನ್ನು ೪) ಏಳುಬಣ್ಣಗಳನ್ನು.

9) ನಮ್ಮ ಕೇತನ ಮೆರೆಯುತಿರಲಿ :

೧) ತಲೆಯನೆತ್ತಿ ೨) ಹಿಮಾಲಯದಲ್ಲಿ ೩) ಕಾಶ್ಮೀರ ಕಣಿವೆಯಲ್ಲಿ ೪) ದೆಹಲಿಯಲ್ಲಿ

10) ತುಂಬಿದ ಕುಣಿಗಲ್ ಕೆರೆಯನ್ನು ಇದಕ್ಕೆ ಹೋಲಿಸಲಾಗಿದೆ.

೧) ಬಾಳೆಹಣ್ಣು ೨) ಲಿಂಬೆ ಹಣ್ಣು ೩) ಮಾವಿನ ಹಣ್ಣು ೪) ಹಲಸಿನ ಹಣ್ಣು

11) ಚೊಕ್ಕವಾದ ಚಿನ್ನ -----ಬಣ್ಣಗಳಿಂದ ತುಂಬಿದೆ.

೧) ೧೨ ೨) ೧೬ ೩) ೨೦ ೪) ೨೪

12) ಶವ ಸಂಸ್ಕಾರ ಮಾಡಲು ಹರಿಶ್ಚಂದ್ರ ರಾಜನು ಕೇಳಿದುದು:

೧) ನೂರು ವರಹ ೨) ಒಂದು ನಾಣ್ಯ ೩) ಮಂಗಲಸೂತ್ರ ೪) ಧಾನ್ಯ

13) ಕೆರೆಯ ಅಂದವನ್ನು ನೋಡಲು ಬಂದವರು :

೧) ತಾಯಿ ೨) ಶಿವ. ೩) ಗಣಪತಿ. ೪) ಅರ್ಜುನ.

14) ಕೈವಾರ ನಾರಾಯಣಪ್ಪನವರ ಅಂಕಿತ :

೧) ಅಮರ ನಾರೇಯಣ. ೨) ವೀರ ನಾರಾಯಣ.

೩) ಗದುಗಿನ ನಾರಾಯಣ. ೪) ಲಕ್ಷ್ಮೀನಾರಾಯಣ.

VII. ಕೆಳಗಿನ ಪ್ರಶ್ನೆಗಳಿಗೆ ೫-೬ ವಾಕ್ಯಗಳಲ್ಲಿ ಉತ್ತರ ಬರೆಯಿರಿ. 3*6=18

1) ಕೋಡಂಗಿಯ ವೇಷಭೂಷಣಗಳು ಯಾವುವು ?

2) ಸುಭಾಸ್ ಚಂದ್ರಭೋಸರು ವಿಧಿವಶರಾದ ಬಗೆ ಹೇಗೆ?

3) ಸಂದರ್ಭದೊಂದಿಗೆ ವಿವರಿಸಿ.

ವಾಹನಗಳಿಗೆ ಸಿಕ್ಕು ಅಪ್ಪಚ್ಚಿಯಾಗುತ್ತವೆ

ಅಥವಾ

ದೇಶಪ್ರೇಮಿಗಳೇ, ನನಗೆ ನಿಮ್ಮ ಶಕ್ತಿ ನೀಡಿ, ನಾನು ನಿಮಗೆ ಸ್ವತಂತ್ರ ಭಾರತವನ್ನು ನೀಡುತ್ತೇನೆ.

4) ಈ ನಾಡು ಹೇಗೆ ಬೆಳೆ ಬೆಳೆಯಬೇಕು?

5) ಬಾಳೆ ಮೀನುಗಳು ಬೊಬ್ಬೆಹೊಡೆಯಲು ಕಾರಣವೇನು ?

6) ಸಂದರ್ಭದೊಂದಿಗೆ ವಿವರಿಸಿ.

ಉರಿವ ಲೋಕದ ನರಕ ಉರಿದು ಕೊನೆಗಾಣಲಿ

ಅಥವಾ

ಗುರುಸೂತ್ರದಲ್ಲಿರುವ ಗುಣವಂತಬಲ್ಲ

VIII. ಕೆಳಗಿನ ಪ್ರಶ್ನೆಗಳಿಗೆ ೮-೧೦ ವಾಕ್ಯಗಳಲ್ಲಿ ಉತ್ತರ ಬರೆಯಿರಿ. 4*2=8

1) ಕಿಟೆಲ್ಲರು ಕನ್ನಡ ನಿಘಂಟು ರಚಿಸುವಲ್ಲಿ ಪಟ್ಟ ಶ್ರಮ ಮನವರಿಕೆ ಮಾಡಿಕೊಡಿ.

ಅಥವಾ

ಸಹಾಯಕ ಶಿಕ್ಷಕರ ಮನಸ್ಸು ಕರಗಿಸಿದ ಘಟನೆಯನ್ನು ವಿವರಿಸಿ

2) ಲೋಹಿತಾಶ್ವನ ಶವಸಂಸ್ಕಾರದ ಸಂದರ್ಭದಲ್ಲಿ ಚಂದ್ರಮತಿಯ ಶೋಕ ಮತ್ತು ಅವಳ ಕರುಣಾಜನಕ ಸ್ಥಿತಿಯನ್ನು ವಿವರಿಸಿ.

ಅಥವಾ

ನಮ್ಮ ಬಲ ಕವಿತೆಯ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.